## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1472/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 13/01/2022

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಹೇಮಂತ ಕುಮಾರ ತಂದೆ ಸಿದ್ರಾಮಪ್ಪ, ಕಂದಾಯ ನಿರೀಕ್ಷಕರು, ಕಸಬಾ ವೃತ್ತ, ಚಿಕ್ಕಮಗಳೂರು ತಾಲ್ಲೂಕು. ಕೆಂಪನಹಳ್ಳಿ, ಚಿಕ್ಕಮಗಳೂರು ಜಿಲ್ಲೆ ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪಶ್ಚಿಮ ವಲಯ, ಮಂಗಳೂರು ಇವರು ಚಿಕ್ಕಮಗಳೂರು ಜಿಲ್ಲೆಯ ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆಯ ಪೋಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಹೇಮಂತ ಕುಮಾರ ತಂದೆ ಸಿದ್ರಾಮಪ್ಪ, ಕಂದಾಯ ನಿರೀಕ್ಷಕರು, ಕಸಬಾ ವೃತ್ತ, ಚಿಕ್ಕಮಗಳೂರು ತಾಲ್ಲೂಕು, ಕೆಂಪನಹಳ್ಳಿ, ಚಿಕ್ಕಮಗಳೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ನಾಸೀರ್ ಖಾನ್ ಬಿನ್ ಅನ್ವರ್ ಖಾನ್, ಗೌರಿಕಾಲುವೆ, ಚಿಕ್ಕಮಗಳೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> ದೂರುದಾರರು ಇಂದಾವರ ಗ್ರಾಮದ ಸರ್ವೆ ನಂಬರ್ 32 ಸರ್ಕಾರಿ ಗೋಮಾಳದಲ್ಲ ಎರಡು ಎಕರೆ ಜಮೀನನ್ನು ಸುಮಾರು 30 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು, ಫಾರ್ಮ್ ನಂ. 53 ರ ಅಡಿ ಜಮೀನು

ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪರಿಶೀಲಿಸಿ ನಿರ್ವಹಿಸಿ, ಕಡತವನ್ನು ಕಮಿಟಿ ಮುಂದೆ ಮೇಲಾಧಿಕಾರಿಗಳ ಮುಖಾಂತರ ಮಂಡಿಸುವ ಕರ್ತವ್ಯ ಎದುರುದಾರರಿಗಿದ್ದು ಕಡತವನ್ನು ಪರಿಶೀಲಿಸಿ ಜಮೀನು ಮಂಜೂರಾತಿಗೆ ಶಿಫಾರಸ್ಸು ಮಾಡಲು ದಿನಾಂಕ 25/01/2017 ರಂದು 50,000/- ರೂಪಾಯಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಸದರಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಸದರಿ ಲಂಚದ ಹಣವನ್ನು ದೂರುದಾರರು ಎದುರುದಾರರಿಗೆ ನೀಡಲು ಇಷ್ಟವಿಲ್ಲದ ಕಾರಣ ಚಿಕ್ಕಮಗಳೂರು ಜಿಲ್ಲೆ ಎ.ಸಿ.ಬಿ. ಪೊಲೀಸ್ ಠಾಣೆಗೆ ರೆಕಾರ್ಡ್ ಮಾಡಿದ ಸಂಭಾಷಣೆಯೊಂದಿಗೆ ದಿನಾಂಕ 01/02/2017 ರಂದು ದೂರನ್ನು ನೀಡಿರುತ್ತಾರೆ. ಈ ಬಗ್ಗೆ ಚಿಕ್ಕಮಗಳೂರು ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 01/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 01/02/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು ಸದರಿ ಸಿ.ಡಿ.ಯನ್ನು ಪಂಚರಿಗೆ ಕೇಳಿಸಿ, ಅಪಿಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 15,000/- ಗಳನ್ನು ದೂರುದಾರರು ಹಾಜರುಪಡಿಸಿದ್ದು ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಫ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಫ್ತಲಿನ್ ಪೌಡರ್ ಲೇಪಿಸಿ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಎಸ್. ಗೋಪಾಲ ತಂದೆ ಲೇಟ್ ಸುಂದರ್, ಕಿರಿಯ ಸಹಾಯಕರು, ಮೆಸ್ಕಾಂ ವಿಭಾಗೀಯ ಕಛೇರಿ, ಚಿಕ್ಕಮಗಳೂರು

ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ, ನಂತರ ತಿಳಿಸಬೇಕೆಂದು ತನಿಖಾಧಿಕಾರಿಗಳು ನೀಡಿದ ಮೊಬೈಲ್‌ನಲ್ಲಿ ಧ್ವನಿ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ದೂರುದಾರರಿಗೆ ತಿಳಿಸಿರುತ್ತಾರೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದಾಗ ದೂರುದಾರರು ಕೈಯಿಂದ ತಲೆಯನ್ನು ಸವರಿಕೊಳ್ಳುವ ಮೂಲಕ ಸಂಜ್ಞೆಯನ್ನು ನೀಡಬೇಕೆಂದು ತನಿಖಾಧಿಕಾರಿಗಳು ಸೂಚನೆಯನ್ನು ನೀಡಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ಚಿಕ್ಕಮಗಳೂರಿನ ತಾಲ್ಲೂಕಾ ಕಛೇರಿಯ ಮೊದಲನೇ ಮಹಡಿಯಲ್ಲಿ ಎದುರುದಾರರು ಕೆಲಸ ನಿರ್ವಹಿಸುತ್ತಿರುವ ಕೊಠಡಿಯಲ್ಲಿ ಎದುರುದಾರರನ್ನು ದೂರುದಾರರು ನೆರಳು ಸಾಕ್ಷಿಯೊಂದಿಗೆ ಭೇಟಿ ಮಾಡಿದಾಗ ದೂರುದಾರರಿಗೆ "ಎಷ್ಟು ಹಣ ತಂದಿದ್ದೀಯಾ" ಎಂದು ಕೇಳಿದರು. ಅದಕ್ಕೆ ದೂರುದಾರರು "ಈಗ 15,000/- ರೂ. ತಂದಿದ್ದೇನೆ" ಎಂದು ಹೇಳಿದಾಗ ಅದಕ್ಕೆ ಎದುರುದಾರರು "ಬಾಕಿ ಹಣ ಯಾವಾಗ ತರುತ್ತೀಯಾ" ಎಂದು ಕೇಳಿದರು. ಅದಕ್ಕೆ ದೂರುದಾರರು "ಇದೇ ತಿಂಗಳು ಕಮಿಟಿ ನಡೆಯುತ್ತದೆಯಲ್ಲ, ಆಗ ಬಾಕಿ ಕೊಡುತ್ತೇನೆ" ಎಂದು ಹೇಳಿದರು. ಆಗ ಎದುರುದಾರರು ದೂರುದಾರರಿಗೆ ತಂದಿದ್ದ 15,000/- ರೂ. ಲಂಚದ ಹಣವನ್ನು ಟೇಬಲ್ ಮೇಲೆ ಇಡಲು ಹೇಳಿದರು. ಆಗ ದೂರುದಾರರು ಫಿನಾಪ್ತಲಿನ್ ಪೌಡರ್ ಲೇಪಿತ 15,000/- ರೂ. ಲಂಚದ ಹಣವನ್ನು ಎದುರುದಾರರ ಟೇಬಲ್ ಮೇಲೆ ಇಟ್ಟಿರುತ್ತಾರೆ. ಆಗ ಎದುರುದಾರರು ಟೇಬಲ್ ಮೇಲೆ ಇದ್ದ ಒಂದು ಪೇಪರನ್ನು ಮುಚ್ಚಿ ಅದರ ಮೇಲೆ ಇದ್ದ ನೀಲಿ ಬಣ್ಣದ ಬೆಲ್‌ನ್ನು ಇಟ್ಟರು. ನಂತರ "ನೀನು ಹೋಗಪ್ಪ" ಎಂದು ಹೇಳಿದರು. ಆಗ ದೂರುದಾರರು ಎದುರುದಾರರ ಕೊಠಡಿಯಿಂದ ಹೊರಗೆ ಬಂದು ತಾಲ್ಲೂಕಾ ಕಛೇರಿಯ ಮುಖ್ಯ ದ್ವಾರದಿಂದ ಹೊರ ಬಂದು ತನಿಖಾಧಿಕಾರಿಯವರಿಗೆ ತಲೆಯನ್ನು ಕೈಯಿಂದ ಸವರಿಕೊಳ್ಳುವುದರ ಮೂಲಕ ನಿಗದಿತ ಸಂಜ್ಞೆಯನ್ನು ನೀಡಿರುತ್ತಾರೆ. ನಂತರ

ತನಿಖಾಧಿಕಾರಿಗಳು ಸಹ ಪಂಚ ಮತ್ತು ಸಿಬ್ಬಂದಿಯೊಂದಿಗೆ ಎದುರುದಾರರ ಕಛೇರಿ ಒಳಗೆ ಹೋಗಿ ತಮ್ಮ ಪರಿಚಯವನ್ನು ಮಾಡಿಕೊಂಡು ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯ ಮೂಲಕ ತಹಸೀಲ್ದಾರ್‌ರವರಿಗೆ ಎದುರುದಾರರ ಕೊಠಡಿಗೆ ಬರುವಂತೆ ತಿಳಿಸಿದ್ದು, ತಹಸೀಲ್ದಾರ್‌ರವರು ಆರ್. ಐ. ಕೊಠಡಿಗೆ ಹಾಜರಾಗಿರುತ್ತಾರೆ. ನಂತರ ಪ್ಲಾಸ್ಟಿಕ್ ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಅದರಲ್ಲಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಅದ್ದಿದಾಗ ಅವು ಗುಲಾಬಿ ಬಣ್ಣಕ್ಕೆ ಬದಲಾಗಿರುತ್ತವೆ. ಸದರಿ ದ್ರಾವಣಗಳನ್ನು ಹಾಗೂ ಮಾದರಿ ದ್ರಾವಣಗಳನ್ನು ತನಿಖಾಧಿಕಾರಿಗಳು ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರನ್ನು "ಲಂಚದ ಹಣವನ್ನು ಎಲ್ಲಿ ಇಟ್ಟುಕೊಂಡಿರುತ್ತೀರಿ" ಎಂದು ಕೇಳಿದಾಗ "ತಾವು ಕುಳಿತುಕೊಳ್ಳುವ ಟೇಬಲ್ಲಿನ ಮೇಲೆ ಪೇಪರ್ ಮುಚ್ಚಿ ಅದರ ಮೇಲೆ ಟೇಬಲ್ ಬೆಲ್‌ನ್ನು ಇಟ್ಟಿರುತ್ತೇನೆ" ಎಂದು ತೋರಿಸಿದರು. ಆಗ ಲಂಚದ ಹಣ ಮುಚ್ಚಿದ ಭಾಗವನ್ನು ತೆಗೆದು ಸ್ವಚ್ಛ ಹತ್ತಿಯಿಂದ ಒರೆಸಿ ಹತ್ತಿಯನ್ನು ಪ್ಲಾಸ್ಟಿಕ್ ಕವರಿಗೆ ಹಾಕಿ ಅದನ್ನು ಹಾಗೂ ಮುಚ್ಚಿದ ಪೇಪರನ್ನೂ ಸಹ ವಶಪಡಿಸಿಕೊಂಡಿರುತ್ತಾರೆ. ಟೇಬಲ್ ಮೇಲಿದ್ದ ಲಂಚದ ಹಣವನ್ನು ಪರಿಶೀಲಿಸಲಾಗಿ 2,000/- ಮುಖ ಬೆಲೆಯ 5 ನೋಟುಗಳು ಹಾಗೂ 500/- ರೂ. ಮುಖ ಬೆಲೆಯ 10 ನೋಟುಗಳು, ನೋಟಿನ ಸಂಖ್ಯೆ ಮತ್ತು ಮೌಲ್ಯ ಒಟ್ಟು 15,000/- ರೂ.ಗಳು ಪ್ರಾಯೋಗಿಕ ಪಂಚನಾಮೆ ಕಾಲದಲ್ಲಿ ಬರೆದುಕೊಂಡ ನಂಬರ್‌ಗಳಿಗೂ ಮೌಲ್ಯಕ್ಕೂ ಮತ್ತು ಸಂಖ್ಯೆಗೂ ತಾಳೆಯಾಗಿರುತ್ತವೆ. ಟೇಬಲ್ ಮೇಲಿದ್ದ ನೀಲಿ ಬಣ್ಣದ ಕ್ಲಾತ್‌ನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ಅದೂ ಸಹ ಗುಲಾಬಿ ಬಣ್ಣಕ್ಕೆ ಬದಲಾಗಿದ್ದು ಸದರಿ ದ್ರಾವಣವನ್ನೂ ಸಹ ಪ್ರತ್ಯೇಕವಾಗಿ ವಶಪಡಿಸಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ಎದುರುದಾರರು ಕುಳಿತಲ್ಲೆ ನಿತ್ರಾಣಗೊಂಡಿದ್ದು, ವಿಚಾರಿಸಲಾಗಿ ತನಗೆ ಎದೆನೋವು ಕಾಣಿಸುತ್ತಿದೆ ಎಂದು ಹೇಳಿದ್ದರಿಂದ ಕಛೇರಿಯ ಸಿಬ್ಬಂದಿಯಾದ ಶ್ರೀ ವಿ. ಎ. ಸತ್ಯನಾರಾಯಣ ಹಾಗೂ ಎದುರುದಾರರ ಸ್ನೇಹಿತ ಶ್ರೀ ಆದರ್ಶ್ ಮತ್ತು ತಮ್ಮ ಸಿಬ್ಬಂದಿಯವರೊಂದಿಗೆ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. ದೂರುದಾರರು ಜಪ್ತಿ ಕಾಲದಲ್ಲಿ ನಡೆಯುವ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ಮುದ್ರಿಸಿಕೊಳ್ಳಲು ತಿಳಿಸಿ, ಪ್ಯಾಂಟ್ ಜೇಬಿನಲ್ಲಿಟ್ಟಿದ್ದು ಅದು ಕೆಳಕ್ಕೆ ಬಿದ್ದು ಸ್ವಿಚ್ ಆಫ್ ಆದ ಕಾರಣ ಯಾವುದೇ ಸಂಭಾಷಣೆಯು ರೆಕಾರ್ಡ್ ಆಗಿರುವುದಿಲ್ಲವೆಂದು

ದೂರುದಾರರು ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಎದುರುದಾರರ ಮತ್ತು ದೂರುದಾರರ ಮಧ್ಯ ನಡೆದ ಸಂಭಾಷಣೆ ದಿ: 25/01/2017 ರಂದು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದನ್ನು ತಹಸೀಲ್ದಾರ್ ಶ್ರೀ ಶಿವಣ್ಣ ಇವರಿಗೆ ಹೆಡ್ ಫೋನ್ ಮೂಲಕ ಕೇಳಿಸಿದ್ದು, ಸದರಿ ಸಂಭಾಷಣೆಯ ಒಂದು ಧ್ವನಿ ಎದುರುದಾರರ ಧ್ವನಿ ಆಗಿರುತ್ತದೆ ಎಂದು ಗುರ್ತಿಸಿರುತ್ತಾರೆ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಕೇಳಲು ಸಾಧ್ಯವಾಗಿರುವುದಿಲ್ಲ. ಕಾರಣ ಎದುರುದಾರರು ಜಪ್ತಿ ಪಂಚನಾಮೆ ಕಾಲದಲ್ಲಿ ಎದುರುದಾರರಿಗೆ ಎದೆ ನೋವು ಕಾಣಿಸಿಕೊಂಡಿರುವುದರಿಂದ ಅವರನ್ನು ಅವರ ಕಛೇರಿ ಸಿಬ್ಬಂದಿಯೊಂದಿಗೆ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗಿತ್ತು.

6) ಸದರಿಯವರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ಮೊಬೈಲ್‌ನಲ್ಲಿ ಮಾತನಾಡಿದ ಸಂಭಾಷಣೆ, ಪಿನಾಪ್ತಲಿನ್ ಪೌಡರ್ ಲೇಪಿತ ಹಣವನ್ನು ಸ್ವೀಕರಿಸಿದ ಬಗ್ಗೆ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ. ಧ್ವನಿ ವಿಶ್ಲೇಷಣಾ ವರದಿಯಲ್ಲಿ ಎದುರುದಾರರ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ.

7) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 30/08/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ನಾನು ದೂರುದಾರರಿಂದ ಯಾವುದೇ ಹಣವನ್ನು ಸ್ವೀಕರಿಸಿರುವುದಿಲ್ಲ. ತನಿಖಾಧಿಕಾರಿಗಳು ಬಂದು ಜಪ್ತಿ ಮಾಡಿದಾಗ ನನ್ನ ಟೇಬಲ್ ಮೇಲಿರುವ ಹಣವಿರುವುದು ತಿಳಿದುಕೊಂಡಿರುತ್ತೇನೆ. ಸದರಿ ಹಣಕ್ಕೂ ನನಗೂ ಯಾವುದೇ ಸಂಬಂಧವಿರುವುದಿಲ್ಲ. ನಾನು ಕಛೇರಿ ಸಮಯದಲ್ಲಿ ಮೇಲಾಧಿಕಾರಿಗಳ ಕಛೇರಿಗೆ ಹೋಗಿದ್ದಾಗ ನನ್ನ ಕಛೇರಿ ತೆರೆದಿದ್ದು ಸದರಿ ಸಂದರ್ಭದಲ್ಲಿ ನನ್ನನ್ನು ಸಿಕ್ಕಿಸುವ ಉದ್ದೇಶದಿಂದ ಯಾರೋ ಹಣವನ್ನು ತಂದಿಟ್ಟಿರುತ್ತಾರೆ. ನಂತರ ನನ್ನ ಎರಡೂ ಮುಂಗೈಗಳನ್ನು ತನಿಖಾಧಿಕಾರಿಗಳು ತಮ್ಮ ಜೊತೆಯಲ್ಲಿ ತಂದಿದ್ದ ಸ್ಟೀಲ್ ಬೌಲ್‌ನಲ್ಲಿ ಅದ್ದಿದಾಗ ಯಾವ ತರಹದ ಬಣ್ಣವೂ ಬಂದಿರುವುದಿಲ್ಲ. ನಂತರ ನನಗೆ

ಆರೋಗ್ಯ ಸಮಸ್ಯೆ ಉಂಟಾಗಿದ್ದರಿಂದ ನನ್ನನ್ನು ತಕ್ಷಣವೇ ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ. ನಂತರದ ಬೆಳವಣಿಗೆಗಳು ನನ್ನ ಗಮನಕ್ಕೆ ಬಂದಿರುವುದಿಲ್ಲ. ಸದರಿ ಕಡತವು ನನ್ನ ಪ್ರಭಾರದಲ್ಲಿ ಬಂದಿರುವುದಿಲ್ಲ. ನನಗೆ ಈ ಕಡತದ ಬಗ್ಗೆ ಮಾಹಿತಿ ಸಹ ಇರುವುದಿಲ್ಲ. ನಾನು ಯಾವುದೇ ವಿಧವಾದ ತಪ್ಪೆಸಗಿರುವುದಿಲ್ಲ. ಈ ಸುಳ್ಳು ದೂರುಗಳಿಂದ ನನ್ನನ್ನು ವಿನಾಕಾರಣ ಬಲಿಪಶು ಮಾಡಲಾಗಿದೆ. ಇದರಿಂದ ನಾನು ಮಾನಸಿಕ ಹಿಂಸೆ ಅನುಭವಿಸುತ್ತಿದ್ದೇನೆ. ಈ ಪ್ರಕರಣದಿಂದ ನನ್ನನ್ನು ಮುಕ್ತಗೊಳಿಸಬೇಕೆಂದು ಕೋರುತ್ತೇನೆ" ಎಂದು ಲಿಖಿತ ಸಮಜಾಯಿಷಿಯನ್ನು ನೀಡಿರುತ್ತಾರೆ. ಸದರಿಯವರ ಸಮಜಾಯಿಷಿಯು ವ್ಯತಿರಿಕ್ತ ಸಮಜಾಯಿಷಿಯಾಗಿದ್ದು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

8) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

9) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

10) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

11) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i) ರಿಂದ (iii) ರ ಅಡಿಯಲ್ಲಿ

ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

12) ಮುಂದುವರೆದು. ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **<u>ಮೂರು ತಿಂಗಳೊಳಗೆ</u>** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

18-1-22

**(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)**
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.